ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) ಕೆರೆಗಳನ್ನು ಜಿನುಗು ಕೆರೆಗಳನ್ನಾಗಿ ಪರಿವರ್ತಿಸಿ ಅಂತರ್ಜಲ ಹೆಚ್ಚಿಸುವ ಕಾರ್ಯಕ್ರಮ ರೂಪಿಸಿರುವುದಿಲ್ಲ ಆದರೆ, ಅಫ್ಜಲಪುರ ತಾಲ್ಲೂಕಿನಲ್ಲಿ ಬಳ್ಳೂರ್ಗಿ, ಕರಜಗಿ, ಬಡದಾಳ ಗ್ರಾಮಗಳ ಹತ್ತಿರ ಇಂಗು ಕೆರೆ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಿದ್ದು, ಇದರಿಂದ ಅಂತರ್ಜಲ ಹೆಚ್ಚಾಗುವ ಸಹಕಾರಿಯಾಗುವುದು

828 ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಮುಂಡರಗಿ ತಾಲ್ಲೂಕು ಗುಮ್ಮಗೋಳ ಗ್ರಾಮವನ್ನು ತುಂಗಭದ್ರಾ ನದಿ ಸುತ್ತು ಹಾಕಿ ಮುಳುಗಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದರೆ, ಈ ಗ್ರಾಮವನ್ನು ಸ್ಥಳಾಂತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು(ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಸಿಂಗಟಾಲೂರ (ಹುಲಿಗುಡ್ಡ) ಏತ ನೀರಾವರಿ ಯೋಜನೆಯಡಿ ನೀರು ಸಂಗ್ರಹಣೆ ಪ್ರಾರಂಭವಾದಲ್ಲಿ ಗುಮ್ಮಗೋಳ ಗ್ರಾಮವು ಮುಳುಗಡೆಯಾಗುವ ಸಾಧ್ಯತೆ ಇರುತ್ತದೆ

ಆ) ಗುಮ್ಮಗೋಳ ಗ್ರಾಮದ ಪುನರ್ ವಸತಿಗಾಗಿ ಒಟ್ಟು 50ಎ–04 ಗುಂಟೆ ಜಮೀನು ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದ್ದು ಸದ್ಯಕ್ಕೆ ಈ ಪ್ರಕರಣವು ವಿಶೇಷ ಭೂಸ್ವಾಧೀನ ಅಧಿಕಾರಿಗಳು(ಸಿಂಗಟೂರ ಏತ ನೀರಾವರಿ ಯೋಜನೆ) ಹೂವಿನಹಡಗಲಿ ಇವರಲ್ಲಿ ಕಲಂ5(ಎ) ಪ್ರಕಾರ ಚೌಕಶಿ ಹಂತದಲ್ಲಿ ಇರುತ್ತದೆ

829 (1240) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದ ಹಣಕಾಸಿನ ಪರಿಸ್ಥಿತಿ ಹೇಗಿದೆ, ಉತ್ತಮವಾಗಿದೆಯೇ (ವಿವರ ನೀಡುವುದು),

ಆ) ಸಾರಾಯಿ ನಿಷೇಧದಿಂದ ಸರ್ಕಾರಕ್ಕೆ ಬರಬೇಕಾದ ಆದಾಯದ ಕೊರತೆ ಎಷ್ಟು ,

ಇ) ಇದನ್ನು ಯಾವ ಮೂಲಗಳಿಂದ ಭರಿಸಲು ಸರ್ಕಾರ ಕ್ರಮ ಕೈಗೊಂಡಿದೆ (ವಿವರ ನೀಡುವುದು)?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

ಅ) ರಾಜ್ಯದ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿದೆ

ಆ) ವಾರ್ಷಿಕ ಸುಮಾರು 1900 ಕೋಟಿ ರೂ ಗಳು

ಇ) ಸಾರಾಯಿ ನಿಷೇಧದಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಸರ್ಕಾರಕ್ಕ ಬರಬೇಕಾದ ಬೇರೆ ರಾಜ್ಯಸ್ಪಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮೂಲಕ ಭರಿಸಲಾಗುವುದು

831 (1199) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) 2006–07ನೇ ಸಾಲಿನಲ್ಲಿ ಭಾಲ್ಕಿ ತಾಲ್ಲೂಕಿನಲ್ಲಿ ವಿಧವಾ ಮತ್ತು ವೃದ್ಧಾಪ್ಯ ವೇತನವನ್ನು ಎಷ್ಟು ಜನರಿಗೆ ಮಂಜೂರು ಮಾಡಲಾಗಿದೆ,

ಆ) ವೃದ್ಧಾಪ್ಯವೇತನ ಮತ್ತು ವಿಧವಾ ವೇತನ ನೀಡುವಲ್ಲಿ ಅನುಸರಿಸುವ ಮಾನದಂಡಗಳು ಯಾವುವು,

ಇ) ವೃದ್ಧಾಪ್ಯ ವೇತನ ಮತ್ತು ವಿಧವಾ ಮಾಸಾಶನ ಪ್ರತಿ ತಿಂಗಳಿಗೆ 200 00 ರೂ ಕೊಡುತ್ತಿದ್ದು ಈಗ 400 00 ರೂ ಗಳಿಗೆ ಹೆಚ್ಚಿಸಿರುವ ಬಗ್ಗೆ ಸರ್ಕಾರ ಆದೇಶ ಹೊರಡಿಸಿದೆಯೇ,

ಈ) ಈ ಆದೇಶವು ಯಾವಾಗಿನಿಂದ ಜಾರಿಯಲ್ಲಿದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 2006–07ನೇ ಸಾಲಿನಲ್ಲಿ ಈ ಕೆಳಕಂಡ ಜನರಿಗೆ ವೃದ್ಧಾಪ್ಯ ವೇತನ ಮತ್ತು ವಿಧವಾ ವೇತನ ಮಂಜೂರು ಮಾಡಲಾಗಿದೆ

ವೃದ್ಧಾಪ್ಯ ವೇತನ	**ವಿಧವಾ ವೇತನ**
518 ಜನರಿ	387 ಜನರಿಗೆ

ಆ) ಸರ್ಕಾರ ನಿಗದಿ ಪಡಿಸಿರುವ ಮಾನ ದಂಡಗಳು ಈ ಕೆಳಕಂಡಂತಿವೆ

ವಿಧವಾ ವೇತನ	ವೃದ್ಧಾಪ್ಯ ವೇತನ
1)ಪೋಷಿಸುವ ಗಂಡು ಮಕ್ಕಳಿರಬಾರದು	1)65 ವರ್ಷ ಮೇಲ್ಪಟ್ಟಿರಬೇಕು
2)ಪತಿಯ ಮರಣ ದೃಢೀಕರಣ ಪತ್ರ	2)ಆದಾಯವಿರಬಾರದು
3) ವಾರ್ಷಿಕ ವರದಾನ ರೂ 6000/– ಮೀರಿರಬಾರದು	3)ಗಂಡು ಮಕ್ಕಳಿರಬಾರದು
4)ಮರು ಮದುವೆ ಆಗಿರಬಾರದು	4)ಯಾರೊಬ್ಬರ ಆಶ್ರಯವಿರಬಾರದು ಹಾಗೂ ಭಿಕ್ಷುಕರಾಗಿರಬಾರದು